



ಆನರ್ಸ್ ಬೇಕಾದರೆ ಮಾಡಲಿ' ಎಂಬುದು ಅವರ ಯೋಚನೆ. ಕುಟುಂಬದ ಸಂಬಂಧಿಕರೆಲ್ಲಾ ಹೆದರಿಸಿದ್ದರು – 'ಎಲೆಕ್ಟ್ರಿಕಲ್ ಎಂಜಿನಿಯರ್ ಅಂದ್ರೆ ವಿದ್ಯುತ್ ಕಂಬ ಹತ್ತಬೇಕಾಗುತ್ತೆ'.

ಶಾಂತಾ 1960ರ ಆಗಸ್ಟ್‌ನಲ್ಲಿ ಐ.ಐ.ಎಸ್ಸಿ. ಸೇರಿದರು. ಡಾ. ಎಸ್. ಭಗವಂತಮ್ ನಿರ್ದೇಶಕರಾಗಿದ್ದರು, ಪ್ರವೇಶಕ್ಕೆ ಅಗತ್ಯವಾದ ಸಂದರ್ಶನವನ್ನು ಅವರೇ ತೆಗೆದುಕೊಂಡಿದ್ದರು. ಕೋರ್ಸ್ ಕಠಿಣವಿತ್ತು, ಆದರೆ ಶಾಂತಾ ಕಂಬ ಹತ್ತಬೇಕಿರಲಿಲ್ಲ!

ಎಲೆಕ್ಟ್ರಿಕಲ್ ಕಮ್ಯುನಿಕೇಷನ್ ಎಂಜಿನಿಯರಿಂಗ್ (ಇ.ಸಿ.ಇ.) ವಿಭಾಗದಲ್ಲಿ ಅವರ ತರಗತಿಯಲ್ಲಿ 30 ಜನ ವಿದ್ಯಾರ್ಥಿಗಳಿದ್ದರು. ಅವರಲ್ಲಿ ಶಾಂತಾ ಅವರೂ ಸೇರಿದಂತೆ, ಐದು ಜನ ಮಾತ್ರ ಹುಡುಗಿಯರು. ಈ 'ಪಂಚಕನ್ಯೆ'ಯರು, ಲಕ್ಷ್ಮಿ ದ್ವಾರಕಾನಾಥ್, ಪ್ರಭ, ವಸಂತ, ಭಾರತಿ ಭಟ್ ಮತ್ತು ಶಾಂತಾ. ಈ ಹೆಣ್ಣುಮಕ್ಕಳು ಒಬ್ಬರಿಗೊಬ್ಬರು ಬೆಂಬಲವಾಗಿ ಆತ್ಮೀಯ ಸ್ನೇಹಿತರಾದರು. ಈ ಸ್ನೇಹ ಆರು ದಶಕಗಳಾಚೆಗೂ ಉಳಿದು, ಬೆಳೆದಿದೆ!

ಅವರ ಸಹಪಾಠಿಗಳಲ್ಲಿ ವಿಜಯರಾಘವನ್ ಎಂಬ ಹಸನ್ಮುಖಿ ಯುವಕನಿದ್ದ; ಸದಾ ನಗೆಚಟಾಕಿ ಹಾರಿಸುವ ಹರ್ಷಚಿತ್ತ ಸ್ವಭಾವದ ಹುಡುಗ. ಇನ್‌ಸ್ಟಿಟ್ಯೂಟ್‌ನ ಈ ದಿನಗಳಲ್ಲಿ, ಆತ ಶಾಂತಾ ಅವರಿಗೆ ಕೇವಲ ಸಹಪಾಠಿ.

ಶಾಂತಾ ಅವರಿಗೆ ಎಂಜಿನಿಯರಿಂಗ್ ಕೋರ್ಸ್ ಇಷ್ಟವಾಯಿತು. ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ಗೆ ಸಂಬಂಧಿಸಿದ ವಿಷಯಗಳಲ್ಲದೆ, ಅನೇಕ ವಿಷಯಗಳಿದ್ದವು – ಮೆಟೀರಿಯಲ್ ಸ್ಟ್ರೆಂತ್, ಥರ್ಮೋಡೈನಮಿಕ್ಸ್, ಸರ್ವೆ, ವರ್ಕ್‌ಶಾಪ್ ಮುಂತಾದವು. ಜೊತೆಗೆ ಅರ್ಥಶಾಸ್ತ್ರ, ಮನಃಶಾಸ್ತ್ರ, ಜರ್ಮನ್ ಭಾಷೆ ಕೂಡ ಕಲಿಯಬೇಕಿತ್ತು. ಇವೆಲ್ಲವು ಅವರ ವೃತ್ತಿ ಜೀವನಕ್ಕೆ ವಿಶಾಲವಾದ ಅಡಿಪಾಯವನ್ನು ಹಾಕಿದವು.

ಅಕ್ಕ ಹೇಮಾಳ ಮನೆಯಲ್ಲಿ ಶಾಂತಾ ಉಳಿದುಕೊಂಡಿದ್ದರು. ಅಕ್ಕನಿಗೆ ತಂಗಿ ಐ.ಐ.ಎಸ್ಸಿ. ಯಲ್ಲಿ ಸೀಟು ಪಡೆದು ಓದುತ್ತಿರುವಳೆಂಬುದು ಅಗಾಧ ಹೆಮ್ಮೆಯ ವಿಷಯವಾಗಿತ್ತು. ತನಗೆ ಮುಚ್ಚಿದ್ದ ಅವಕಾಶದ ಬಾಗಿಲನ್ನು ಈ ಅಕ್ಕ, ತನ್ನ ತಂಗಿಗೆ ತೆರೆದಿದ್ದಳು. ಅಕ್ಕನ ಬದುಕು ಕಠಿಣ ಪರಿಸ್ಥಿತಿಯಲ್ಲಿತ್ತು. ಹಣದ ಮುಗ್ಗಟ್ಟೂ ಇತ್ತು. ಚಿಕ್ಕ ಮಗು ಇದ್ದ ಕಾರಣ ಅಕ್ಕ ಹೊರಗೆ ಹೋಗಿ ದುಡಿಯಲು ಸಾಧ್ಯವಿರಲಿಲ್ಲ; ಮನೆಯಲ್ಲಿಯೇ ಕಿರ್ಲೋಸ್ಕರ್ ಕಂಪನಿಗೆ ಮೋಟಾರುಗಳನ್ನು ವೈಂಡ್ ಮಾಡಿಕೊಟ್ಟು ಒಂದಿಷ್ಟು ಗಳಿಸುತ್ತಿದ್ದರು. ಅದು ಕಠಿಣ ಕೆಲಸವಾಗಿತ್ತು. ಪ್ರತಿಭಾವಂತ ಅಕ್ಕ ವೈದ್ಯಳಾಗಬಹುದಿತ್ತು, ತನ್ನ ಕಾಲ ಮೇಲೆ ನಿಂತು ಕುಟುಂಬವನ್ನು ಸುಲಭವಾಗಿ ಸಂಭಾಳಿಸಬಹುದಿತ್ತು. ಅಷ್ಟು ಬೇಗ ಓದು ಬಿಡಿಸಿ ಮದುವೆ ಮಾಡಿದ್ದ ಆಕೆ ಇಂದು ಮೋಟಾರುಗಳನ್ನು

ಶಾಂತಾ ವಿಜಯರಾಘವನ್, ಟಾಟಾ ಇನ್‌ಸ್ಟಿಟ್ಯೂಟಿನ ದಿನಗಳಲ್ಲಿ (ಎಡದಿಂದ ಎರಡನೆಯವರು)